# ೧. ಜ್ಞಾನ

**ಕರಿಘನ : ಅಂಕುಶ ಕಿರಿದೆನ್ನಬಹುದೆ? ಬಾರದಯ್ಯ.**
**ಗಿರಿಘನ : ವಜ್ರ ಕಿರಿದೆನ್ನಬಹುದೇ? ಬಾರದಯ್ಯ.**
**ತಮಂಧ ಘನ : ಜ್ಯೋತಿ ಕಿರಿದೆನ್ನಬಹುದೇ?**
**ಬಾರದಯ್ಯ**
**ಮರಹು ಘನ : ನಿಮ್ಮ ನೆನೆವ ಮನ**

**ಕಿರಿದೆನ್ನಬಹುದೇ? ಬಾರದಯ್ಯ, ಕೂಡಲಸಂಗಮದೇವಾ.**

**ಅರ್ಥ** : ಆನೆ ದೊಡ್ಡದು, ಅದನ್ನು ಹತೋಟಿಯಲ್ಲಿಡುವ ಅಂಕುಶ ಚಿಕ್ಕದೆನ್ನಲಾಗುವುದೇ; ಬೆಟ್ಟ ದೊಡ್ಡದು, ಅದನ್ನು ಸೀಳುವ ಸಿಡಿಲು ಸಣ್ಣದೆನ್ನಲಾದೀತೇ? ಕತ್ತಲೆ ಬಲವತ್ತರವಾದುದು, ಅದನ್ನು ಓಡಿಸುವ ಜರ್‍ಯೋತಿ ಚಿಕ್ಕದೆನ್ನಲಾಗುವುದೇ? ಅದರಂತೆ ಅಜ್ಞಾನ ತೀವ್ರವಾದುದು, ದೇವರನ್ನು ನೆನೆಯುವ ಮನಸ್ಸು ಚಿಕ್ಕದು ಎಂದು ಹೇಳಲು ಬಾರದು. ಮೊದಲನೆಯದವಕ್ಕಿಂತ ಎರಡನೆಯವೇ ದೊಡ್ಡವು ಎಂದು ತಿಳಿ.

# ೨. ಚಂಚಲತೆ

**ಅಂದಣವನೇರಿದ ಸೊಣಗನಂತೆ–**
**ಕಂಡೊಡೆ ಬಿಡದು ತನ್ನ ಮುನ್ನಿನ ಸ್ವಭಾವವನು;**
**ಸುಡು ಸುಡು ಮನವಿದು ವಿಷಯಕ್ಕೆ ಹರಿವುದು;**
**ಮೃಡ, ನಿಮ್ಮನನುದಿನ ನೆನೆಯಲೀಯದು.**
**ಎನ್ನೊಡೆಯ ಕೂಡಲಸಂಗಮದೇವಾ,**
**ನಿಮ್ಮ ಚರಣವ ನೆನವಂತೆ ಕರುಣಿಸು,**
**ಸೆರೆಗೊಡ್ಡಿ ಬೇಡುವೆ, ನಿಮ್ಮ ಧರ್ಮ !**

**ಅರ್ಥ** : ಪಲ್ಲಕ್ಕಿಯನ್ನು ಏರಿದ ನಾಯಿ ಹೊಲಸು ಕಂಡ ತಕ್ಷಣ ಕೆಳಕ್ಕೆ ನೆಗೆಯುವಂತೆ ನಮ್ಮ ಮನಸ್ಸು ಭಕ್ತನಾದ ಮೇಲೂ ಕೂಡ ತನ್ನ ಹಿಂದಿನ ಸ್ವಭಾವಂತೆ ಇಂದ್ರಿಯ ಸುಖದತ್ತ ಓಡುತ್ತದೆ. ಎಲೈ ಶಿವನೆ, ನಿನ್ನನ್ನು ನೆನೆಯಲು ಬಿಡುತ್ತಿಲ್ಲ. ನಿನ್ನನ್ನು ದೈನ್ಯದಿಂದ ಬೇಡುತ್ತೇನೆ. ನಿನ್ನ ಪಾದಗಳನ್ನು ಸದಾ ನೆನೆಯುವಂತೆ ಮಾಡು.

# ೩. ಇಂದ್ರಿಯ ಭೋಗ

**ವಿಷಯವೆಂಬ ಹಸುರೆನ್ನ**
**ಮುಂದೆ ತಂದು ಪಸರಿಸಿದೆಯಯ್ಯಾ.**
**ಪಶುವೇನ ಬಲ್ಲುದು? ಹಸುರೆಂದೆಳೆಸುವುದು.**
**ವಿಷಯರಹಿತನ ಮಾಡಿ ಭಕ್ತಿರಸವ**
**ದಣಿಯೆ ಮೇಯಿಸಿ**
**ಸುಬುದ್ಧಿಯೆಂಬ ಉದಕವನೆರೆದು**
**ನೋಡಿ ಸಲಹಯ್ಯಾ, ಕೂಡಲಸಂಗಮದೇವಾ.**

**ಅರ್ಥ** : ಇಂದ್ರಿಯ ಸುಖವೆನ್ನು ಹಸುರು ಹುಲ್ಲನ್ನು ನನ್ನ ಮುಂದೆ ನೀನು ಹರಡಿದ್ದೀಯೆ. ನಾನೊಂದು ಪಶು. ಹಸುರೆಂದು ಆಸೆಪಡುವೆ. ನನಗೆ ಇಂದ್ರಿಯಗಳ ಇಚ್ಛೆಯಿಲ್ಲದವನಾಗಿ ಮಾಡಿ ಭಕ್ತಿರಸದ ಮೇವನ್ನು ತೃಪ್ತಿಯಾಗುವವರೆಗೆ ಮೇಯಿಸಿ ಒಳ್ಳೆಯ ಬುದ್ಧಿಯೆಂಬ ನೀರುಣಿಸಿ ನಿಗಾವಹಿಸಿ ಕಾಪಾಡು.

## ೪. ಅಸಹಾಯಕತೆ

**ಅತ್ತಲಿತ್ತಲು ಹೋಗದಂತೆ ಹೆಳವನ**
**ಮಾಡಯ್ಯ ತಂದೆ,**
**ಸುತ್ತಿ ಸುಳಿದು ನೋಡದಂತೆ ಅಂಧಕನ**
**ಮಾಡಯ್ಯ ತಂದೆ,**
**ಮತ್ತೊಂದ ಕೇಳದಂತೆ ಕಿವುಡನ**

**ಮಾಡಯ್ಯ ತಂದೆ, ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯ ಕ್ಕೆಳಸದಂತೆ**

**ಇರಿಸುವ, ಕೂಡಲಸಂಗಮದೇವಾ.**

**ಅರ್ಥ** : ನಾನು ಪಂಚೇಂದ್ರಿಯಗಳ ಕಾಟ ತಾಳಲಾರೆ. ಅದಕ್ಕಾಗಿ ಎಲೈ ದೇವನೆ, ನೀನು ಎತ್ತಲೂ ಹೋಗದಂತೆ ನನ್ನನ್ನು ಹೆಳವನನ್ನಾಗಿ ಮಾಡು. ಸುತ್ತಮುತ್ತ ನೋಡದಂತೆ ಕುರುಡನನ್ನಾಗಿ ಮಾಡು. ಬೇರೆ ವಿಚಾರಗಳನ್ನು ಕೇಳದಂತೆ ಕಿವುಡರನ್ನಾಗಿ ಮಾಡು. ನಿನ್ನ ಭಕ್ತನ ವಿಚಾರವಲ್ಲದ ಬೇರೆ ವಿಷಯಗಳತ್ತ ತಿರುಗದಂತೆ ನನ್ನನ್ನು ಇರಿಸು.